## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಗುಂಡ್ಲುಪೇಟೆ

**ಸಿಸಿ ನಂಃ 452/2019**

| | | |
|---|---|---|
| ಸಾಕ್ಷಿದಾರರ ಹೆಸರು | ಪ್ರಶಾಂತಿ | ಪ್ರಮಾಣ ವಚನ ಬೋಧಿಸಿದ<br>ದಿನಾಂಕಃ 30.07.2026 |
| ತಂದೆಯ ಹೆಸರು/<br>ಗಂಡನ ಹೆಸರು | ಪರಮೇಶ | |
| ವಯಸ್ಸು | 45 ವರ್ಷ | |
| ಉದ್ಯೋಗ | ಅಬಕಾರಿ ನಿರೀಕ್ಷಕರು | ಚಾಸಾಃ 4<br>ಫ್ರಾಸಾಃ 5 |
| ವಾಸ | ಹುಣಸೂರು | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ನಾನು 2019 ರಿಂದ ಜೂನ್ 2019 ರವರೆಗೆ ಚಾಮರಾಜನಗರ ಉಪ ವಿಭಾಗ ಅಬಕಾರಿ ಉಪ ಅಧೀಕ್ಷಕರವರ ಕಛೇರಿಯಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 23.03.2019ರಂದು ಲೋಕಸಭಾ ಚುನಾವಣೆ ನಿಮಿತ್ತ ಮಾನ್ಯ ಅಬಕಾರಿ ಉಪ ಆಯುಕ್ತರ ನಿರ್ದೇಶನದಂತೆ ರಾತ್ರಿ 8.00 ಗಂಟೆ ಸಮಯದಲ್ಲಿ ಬೇಗೂರು ಗ್ರಾಮದ ಗಸ್ತು ಕರ್ತವ್ಯ ಮಾಡುತ್ತಿದ್ದು, ಚಾಸಾ–5 ರವರಿಗೆ ಹಂಗಳ ಗ್ರಾಮದಿಂದ ಪುತ್ತನಪುರ ಗ್ರಾಮದ ಕಡೆಗೆ ಒಬ್ಬ ವ್ಯಕ್ತಿಯು ಟಿ ವಿಎಸ್ ಸ್ಟಾರ್ ಸಿಟಿ ದ್ವಿಚಕ್ರ ವಾಹನ ನಂಃ ಕೆಎ– 10–ವೈ– 5637ರ ದ್ವಿಚಕ್ರ ವಾಹನದಲ್ಲಿ ಅಕ್ರಮವಾಗಿ ಮದ್ಯ ವನ್ನು ಕಾಲೇಜು ಬ್ಯಾಗ್ ನಲ್ಲಿ ಹಾಕಿಕೊಂಡು ಸಾಗಣಿಕೆ ಮಾಡುತ್ತಿದ್ದಾರೆ ಎಂದು ರಾತ್ರಿ 8.20 ಗಂಟೆ ಸಮಯಕ್ಕೆ ಬಾತ್ಮಿ ಬಂದಿದ್ದು, ರಾತ್ರಿ 8.45 ಗಂಟೆ ಸಮಯಕ್ಕೆ ನಾನು, ಚಾಸಾ–1, 3 ರಿಂದ 5 ರವರು ಗುಂಡ್ಲುಪೇಟೆ ಮುಖ್ಯ ರಸ್ತೆಯ ಪುತ್ತನಪುರ ಕ್ರಾಸ್ ಕಡೆಗೆ ಬಂದು ಅಲ್ಲಿ ಪಂಚರನ್ನಾಗಿ ದಾರಿಯಲ್ಲಿ ಹೋಗುತ್ತಿದ್ದ ಇಬ್ಬರು ವ್ಯಕ್ತಿಗಳನ್ನು ಕರೆದು ಅವರನ್ನು ಪಂಚರಾಗಲು ಕೇಳಿದಾಗ ಅವರು ನಿರಾಕರಿಸಿ ಹೋಗಿರುತ್ತಾರೆ. ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದ ಇಬ್ಬರು ವ್ಯಕ್ತಿಗಳನ್ನು ಕರೆದು ಪಂಚರಾಗುವಂತೆ ಕೇಳಿದ್ದು ಅವರು ಕೂಡ ನಿರಾಕರಿಸಿ ಹೊರಟು ಹೋಗಿರುತ್ತಾರೆ. ಆದ ಕಾರಣ ಇಲಾಖಾ ಸಿಬ್ಬಂದಿಗಳನ್ನೇ ಪಂಚರನ್ನಾಗಿ ಮಾಡಿ ಹಂಗಳ ಗ್ರಾಮದ ಕಡೆಯಿಂದ ಬರುತ್ತಿದ್ದ ದ್ವಿಚಕ್ರ ವಾಹನಕ್ಕಾಗಿ ವಾಚ್ ಮಾಡುತ್ತಿದ್ದೆವು. ರಾತ್ರಿ 9.00 ಗಂಟೆಗೆ ಒಂದು ದ್ವಿಚಕ್ರ ವಾಹನ ಹಂಗಳ ಗ್ರಾಮದ ಕಡೆಯಿಂದ ಬರುತ್ತಿರುವುದು ವಾಹನದ ಲೈಟ್ ಬೆಳಕಿನಿಂದ ಗೊತ್ತಾಗಿರುತ್ತದೆ. ನಾವುದ್ವಿಚಕ್ರ ವಾಹನವನ್ನು ನಿಲ್ಲಿಸುವಂತೆ ಕೈ ಸನ್ನೆ ಮಾಡಿದಾಗ ಆತ ದ್ವಿಚಕ್ರ ವಾಹನವನ್ನು ನಿಲ್ಲಿಸಿ ಪಕ್ಕದ ಜಮೀನಿನ ಕಡೆಗೆ ಓಡಿ ಹೋಗಿರುತ್ತಾರೆ. ನಾವು ಆತನನ್ನು ಹಿಡಿಯಲು ಪ್ರಯತ್ನ ಮಾಡಿದ್ದು ಆತ ಸಿಗದೇ ತಪ್ಪಿಸಿಕೊಂಡಿರುತ್ತಾನೆ. ನಂತರ ಆತ ಬಿಟ್ಟು ಹೋಗಿದ್ದ ದ್ವಿಚಕ್ರ ವಾಹನ ಹಾಗು ಬ್ಯಾಗ್ ನ್ನು ಶೋಧನೆ ಮಾಡಲು ನ್ಯಾಯಾಲಯದಿಂದ ವಾರೆಂಟ್ ಪಡೆಯಲು ಸಮಯವಕಾಶ ಇಲ್ಲದೇ ಇದ್ದ ಕಾರಣ, ಸ್ಥಳದಲ್ಲಿ ಶೋಧನಾ ವಾರೆಂಟ್ ನ್ನು ತಯಾರು ಮಾಡಿ ದ್ವಿಚಕ್ರ ವಾಹನವನ್ನು ಹಾಗು ಬ್ಯಾಗ್ ನ್ನು ಪರಿಶೀಲನೆ ಮಾಡಲಾಯಿತು. ಸದರಿ ದ್ವಿಚಕ್ರ ವಾಹನದ ನೊಂದಣಿ ಸಂಖ್ಯೆ ಕೆಎ– 10– ವೈ –

5638 ನೀಲಿ ಬಣ್ಣದ ಸ್ಟಾರ್ ಸಿಟಿ ಪ್ಲಸ್ ಬೈಕ್ ಆಗಿದ್ದು, ಬ್ಯಾಗ್ ನ್ನು ತೆಗೆದು ನೋಡಿದಾಗ ಅದರ ಒಳಗೆ 90 ಮಿಲಿಯ 96 ವಿಂಡ್ಸರ್ ಡಿಲಕ್ಸ್ ವಿಸ್ಕಿ ಮದ್ಯದ ಟೆಟ್ರಾ ಪ್ಯಾಕೆಟ್‌ಗಳು ಹಾಗು 180 ಮಿಲಿಯ 8 ಓಲ್ಡ್ ಟಾವರಿನ್ ವಿಸ್ಕಿ ಮದ್ಯದ ಟೆಟ್ರಾ ಪ್ಯಾಕೆಟ್ ಗಳು ಇದ್ದುದು ಕಂಡು ಬಂದಿತು. ಸದರಿ ಟೆಟ್ರಾ ಪ್ಯಾಕೆಟ್ ಗಳ ಅಬಕಾರಿ ಭದ್ರತಾ ಚೀಟಿಗಳ ಮೇಲೆ ಕಪ್ಪು ಬಣ್ಣದ ಪರಮನೆಂಟ್ ಮಾರ್ಕರ್ ನಿಂದ ಗೀಚಿರುವುದು ಕಂಡು ಬಂದಿರುತ್ತದೆ . ನಂತರ ರಾಸಾಯನಿಕ ಪರೀಕ್ಷೆಗಾಗಿ 90 ಮಿಲಿಯ 26 ವಿಂಡ್ಸರ್ ಡಿಲಕ್ಸ್ ವಿಸ್ಕಿ ಮದ್ಯದ ಟೆಟ್ರಾ ಪ್ಯಾಕೆಟ್‌ಗಳು ಹಾಗು 180 ಮಿಲಿಯ 8 ಓಲ್ಡ್ ಟಾವರಿನ್ ವಿಸ್ಕಿ ಮದ್ಯದ ಟೆಟ್ರಾ ಪ್ಯಾಕೆಟ್‌ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆಯಲಾಯಿತು. ಮಾದರಿಗಾಗಿ ತೆಗೆದುಕೊಂಡ ಮದ್ಯವನ್ನು ಸೂಜಿ ದಾರದ ಸಹಾಯದಿಂದ 2 ಬಿಳಿ ಬಣ್ಣದ ಬಟ್ಟೆಯ ಚೀಲಗಳನ್ನು ಹೊಲಿದು ಒಂದದು ಚೀಲದಲ್ಲಿ 26 ಟೆಟ್ರಾ ಪ್ಯಾಕೆಟ್ ಗಳನ್ನು ತುಂಬಿಸಿದ ಅದಕ್ಕೆ ಎ ಎಂದೂ, ಹಾಗು ಇನ್ನೊಂದು ಚೀಲಕ್ಕೆ 8 ಟೆಟ್ರಾ ಪ್ಯಾಕೆಟ್ ಗಳನ್ನು ತುಂಬಿಸಿ ಅದಕ್ಕೆ ಬಿ ಎಂದು ಮಾರ್ಕರ್ ಪೆನ್ನಿನಿಂದ ನಮೂದು ಮಾಡಲಾಗಿರುತ್ತದೆ. ಸ್ಥಳದಲ್ಲಿ ಮಾದರಿ ಸೀಲನ್ನು ತಯಾರಿಸಿ, ಇಲಾಖಾ ಮೊಹರು 273 ರಿಂದ ಸೀಲು ಮಾಡಲಾಯಿತು. ರಾಸಾಯನಿಕ ಪರೀಕ್ಷೆಗಾಗಿ ತೆಗೆದ ಚೀಲಗಳಿಗೆ ನಾನು ಹಾಗು ಇಲಾಖಾ ಸಿಬ್ಬಂದಿಗಳು ಸಹಿ ಮಾಡಿ ಚೀಟಿಯನ್ನು ಅಂಟಿಸಲಾಗಿರುತ್ತದೆ. ಉಳಿದ ಟೆಟ್ರಾ ಪ್ಯಾಕೆಟ್ ಗಳನ್ನು ಕಾಲೇಜು ಬ್ಯಾಗ್ ಗೆ ಹಾಕಿ ದಾರದಿಂದ ಕಟ್ಟಿ ಸೀಲು ಮಾಡಲಾಯಿತು. ನಂತರ ವಾಹನವನ್ನು ಹಾಗು ಮುದ್ದೆ ಮಾಲುಗಳನ್ನು ಇಲಾಖಾ ವಶಕ್ಕೆ ಪಡೆದುಕೊಂಡು ಸ್ಥಳದಲ್ಲಿ ಮಹಜರ್ ನ್ನು ರಾತ್ರಿ 9.00- 10.30 ಗಂಟೆಯವರೆಗೆ ಇಲಾಖಾ ವಾಹನದ ಲೈಟ್ ಹಾಗು ಟಾರ್ಚ್ ಬೆಳಕಿನ ಸಹಾಯದಿಂದ ಬರವಣಿಗೆ ಮಾಡಲಾಯಿತು. ಸದರಿ ಮಹಜರ್ ನ್ನು ಚಾಸಾ-1ರವರು ಬರವಣಿಗೆ ಮಾಡಿರುತ್ತಾರೆ. ಸದರಿ ಸ್ಥಳದ ಚಕ್ಕುಬಂದಿ ಪೂರ್ವಕ್ಕೆ: ಪುತ್ತನಪುರಗ್ರಾಮದ ರಸ್ತೆ, ಪಶ್ಚಿಮಕ್ಕೆ- ಬೇಗೂರು ಮುಖ್ಯ ರಸ್ತೆ, ದಕ್ಷಿಣಕ್ಕೆ- ಖಾಸಗಿ ಜಮೀನು, ಉತ್ತರಕ್ಕೆ ಖಾಸಗಿ ಜಮೀನು ಇರುತ್ತದೆ . ಮಹಜರ್ ನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ಆ ದಿನ ಜಪ್ತು ಮಾಡಿದ ಮದ್ಯದ ಟೆಟ್ರಾ ಪ್ಯಾಕ್ ಗಳು ಇರುವ ಎರಡು ಚೀಲಗಳನ್ನು ಮುದ್ದೆ ಮಾಲುಗಳನ್ನು ಈಗಾಗಲೇ ಮುಮಾ-1 ಮತ್ತು 2 ಎಂದೂ, ಹಾಗು ಕಾಲೇಜು ಬ್ಯಾಗ್ ನ್ನು ಈಗಾಗಲೇ ಮುಮಾ-3 ಎಂದು ಗುರುತಿಸಲಾಗಿದೆ. ನಾನು ಈ ಬಗ್ಗೆ ಚಾಸಾ-8 ರವರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆತ ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದಾನೆ. ದ್ವಿಚಕ್ರ ವಾಹನವನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ**

ಆ ದಿನ ನಾನು ಗಸ್ತು ಕರ್ತವ್ಯಕ್ಕೆ ಹೋಗಿದ್ದ ಬಗ್ಗೆ ಠಾಣಾ ಡೈರಿಯಲ್ಲಿ ನಮೂದು ಇರುತ್ತದೆ .ಠಾಣಾ ಡೈರಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಮಾಹಿತಿ ಚಾಸಾ-5 ರವರಿಗೆ ಬಂದಿರುತ್ತದೆ. ಆ ಸಂದರ್ಭದಲ್ಲಿ ಬೇಗೂರು ಗ್ರಾಮದ ಬಸ್ ನಿಲ್ದಾಣದ ಬಳಿ ಇದ್ದೆವು. ಮಾಹಿತಿ ಬಂದಾಗ ನಾನು, ಚಾಸಾ-1, 3 ರಿಂದ5 ರವರು ಇದ್ದೆವು. ನಾವು ಮಾಹಿತಿ ಬಂದ ನಂತರ ನೇರವಾಗಿ ಪುತ್ತನಪುರ ಗ್ರಾಮದ ಕ್ರಾಸ್ ಬಳಿ ಹೋಗಿದ್ದೆವು. ಪುತ್ತನಪುರ ರಸ್ತೆ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ಸಾಕ್ಷಿ ಮುಂದುವರಿದು ಪುತ್ತನಪುರ ಕ್ರಾಸ್

ಮಾಮೂಲಿ ರಸ್ತೆ ಎಂದು ನುಡಿದಿರುತ್ತಾರೆ. ಸದರಿ ರಸ್ತೆ ರಾಷ್ಟ್ರೀಯ ಹೆದ್ದಾರಿ ಆಗಿರುವ ಕಾರಣ ಬಹಳ ವಾಹನಗಳು ಓಡಾಡುತ್ತವೆ ಎಂದರೆ, ಸಾಕ್ಷಿ ನುಡಿಯುತ್ತಾರೆ ರಾತ್ರಿ ಆದ ಕಾರಣ ಅಷ್ಟು ವಾಹನಗಳು ಸಂಚರಿಸುತ್ತಿರಲಿಲ್ಲ. ತಪಾಸಣೆ ವೇಳೆಯಲ್ಲಿ ಸಾವರ್ಜನಿಕರನ್ನು ಪಂಚರನ್ನಾಗಿ ಮಾಡಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ಆತ ಮದ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಎಲ್ಲಿಂದ ತಂದಿದ್ದ ಎನ್ನುವ ಬಗ್ಗೆ ವಿಚಾರ ಮಾಡಿರಲಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಆತ ಓಡಿ ಹೋಗಿದ್ದ. ನಮ್ಮ ಇಲಾಖೆಯಲ್ಲಿ ಸಾಕಷ್ಟು ವಿದ್ಯುನ್ ಮಾನ ಸಲಕರಣೆಗಳು ಇವೆ ಎಂದರೆ ಸರಿಯಲ್ಲ. ನಿಪಿ–1 ರಲ್ಲಿ ಮದ್ಯದ ಟೆಟ್ರಾ ಪ್ಯಾಕೆಟ್ ಗಳ ಮೇಲೆ ನಮೂದಾದ ಬ್ಯಾಚ್ ನಂಬರ್ ನಮೂದು ಮಾಡಿದ್ದೀರಾ ಎಂದರೆ, ಸಾಕ್ಷಿ ನುಡಿಯುತ್ತಾರೆ ಬ್ಯಾಚ್ ನಂಬರ್ ಮೇಲೆ ಕಪ್ಪು ಬಣ್ಣದ ಮಾರ್ಕರ್ ನಿಂದ ಗೀಚಲಾಗಿತ್ತು. ದ್ವಿಚಕ್ರ ವಾಹನ ಆರೋಪಿಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ರಾತ್ರಿ 9ಗಂಟೆ ಆಗಿದ್ದ ಕಾರಣ ದ್ವಿಚಕ್ರ ವಾಹನದಲ್ಲಿ ಬಂದಿದ್ದ ವ್ಯಕ್ತಿಯನ್ನು ನಾವು ನಿಖರವಾಗಿ ಗುರುತಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಮುಮಾ–1 ರಿಂದ 3 ಹಾಗು ಅರೋಪಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷಿಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–1 ಹಾಾಗು 2 ನ್ನು ಸ್ಥಳದಲ್ಲಿ ಮಾಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆಎಂದರೆ ಸರಿಯಲ್ಲ. ನಿಪಿ–1 ಹಾಗು 2 ನ್ನು ಠಾಣೆಯಲ್ಲಿ ತಯಾರು ಮಾಡಲಾಗಿದೆ ಎಂದರೆ ಸರಿಯಲ್ಲ. ನಾನು ಚಾಸಾ–8ರವರ ಸಮಕ್ಷಮ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿಅಂಶಕ್ಕೊಸ್ಕರ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಜೆಎಂಎಫ್ ಸಿ
ಗುಂಡ್ಲುಪೇಟೆ.